ಏನು ಕೆಲಸ ಮಾಡ್ತಿದೀರಾ? ಸ್ವಂತ ಮನೆ ಇದೆಯಾ? ಬೇರೇನು ಆಸ್ತಿ ಇದೆ?...” ಇತ್ಯಾದಿಗಳು. ನಾನು ನಿಧಾನವಾಗಿ ಎಲ್ಲಕ್ಕೂ ಸರಿ ಉತ್ತರಗಳನ್ನೇ ನೀಡಿದೆ. ಹಸಿರು ಕಾಗದವೊಂದನ್ನು ಕೊಟ್ಟು “ಓ.ಕೆ. ನೆಕ್ಸ್ಟ್” ಎಂದವಳು ನನ್ನ ಪಾಸ್‌ಪೋರ್ಟನ್ನೇ ಕೊಡಲಿಲ್ಲ. ನಾನು “ಪಾಸ್‌ಪೋರ್ಟ್...” ಎಂದಾಕ್ಷಣ “ವಿಲ್ ಸೆಂಡ್ ಇಟ್” ಎಂದಳು. ದೂರದಲ್ಲಿ ನಿಂತಿದ್ದ ಸಿಬ್ಬಂದಿ ಎಕ್ಸಿಟ್‌ನತ್ತ ಕೈತೋರಿದರು. ಕಳವಳದಿಂದಲೇ ಹೊರಬಂದಾಗ ಸುಮಂತ ಫೋನ್‌ನಲ್ಲಿ ಮಾತನಾಡುತ್ತ ನಿಂತಿದ್ದ. “ನನ್ನ ಪಾಸ್‌ಪೋರ್ಟನ್ನೇ ಕೊಡ್ಲಿಲ್ಲಾ ಕಣೋ” ಎಂದು ಆತಂಕದಿಂದ ಹೇಳಿದೆ. ಕೈಸನ್ನೆ ಮಾಡಿ ‘ಆಫೀಸ್ ಕಾಲ್’ ಎಂದು ತೋರಿಸಿ ಆಟೋದಲ್ಲಿ ರೂಮಿಗೆ ಕರೆತಂದ. ನಾನು ಬಟ್ಟೆ ಬದಲಾಯಿಸಿ ಬಂದು ಕುಳಿತಾಗ ಅವನ ಕಾಲ್ ಮುಗಿದಿತ್ತು. ನಾನು ಎ.ಸಿ.ಯಲ್ಲೂ ಬೆವರುತ್ತಿದ್ದೆ. ಮತ್ತೆ “ನನ್ನ ಪಾಸ್‌ಪೋರ್ಟ್...” ಎಂದೆ. ನನ್ನ ಪಕ್ಕ ಕುಳಿತು ಕೈಹಿಡಿದು “ಅಮ್ಮಾ, ಈಗ ಏನಾಯ್ತು ಗೊತ್ತಾ?” ಎಂದು ಕೇಳಿದ. ನಾನು ಪ್ರಶ್ನಾರ್ಥಕವಾಗಿ ಅವನ ಮುಖ ನೋಡುತ್ತಿದ್ದಂತೆ “ಈಗ ನಿನಗೆ ವೀಸಾ ಸಿಗುತ್ತೆ. ಪದ್ಮಿನಿಯವರಿಗೆ ಸಿಗಲ್ಲ” ಎಂದು ಬಾಂಬ್ ಎಸೆದ. ನಾನು ಅಚ್ಚರಿಯಿಂದ “ಅದು ಹ್ಯಾಗೋ... ಅವರದೂ ಸಂದರ್ಶನವಾಯ್ತಲ್ಲ... ಪದ್ಮಿನಿ ನಗುತ್ತ ಕೈಬೀಸಿದರು” ಎಂದೆ. “ಸಂದರ್ಶನವಾದವರಿಗೆಲ್ಲ ವೀಸಾ ಕೊಡಲ್ಲಾಮ್ಮ. ಪಾಸ್‌ಪೋರ್ಟು ಇಟ್ಕೊಂಡ್ರೆ ನಿಮಗೆ ವೀಸಾ ಗ್ರಾಂಟ್ ಆಗಿದೇಂತ ಅರ್ಥ. ಅದರಲ್ಲೇ ಸ್ಟ್ಯಾಂಪ್ ಮಾಡಿ ಕೊಡ್ತಾರೆ. ನಿಮ್ಮ ಪಾಸ್‌ಪೋರ್ಟ್ ತಿರುಗಿ ಕೊಟ್ಬಿಟ್ರೆ ವೀಸಾ ರಿಜೆಕ್ಟ್ ಆಗಿದೇಂತ. ಎಲ್ಲಾ ಗೊತ್ತಿರೋ ಪದ್ಮಿನಿಯವರಿಗೆ ಈ ವಿಷಯ ಗೊತ್ತಿಲ್ಲಾಂತ ಕಾಣುತ್ತೆ. ಖುಷಿಯಿಂದ ತೆಗೆದುಕೊಂಡು ಹೋಗ್ತಾ ಇದ್ರು. ಈಗ ನೀನೇ ಮೊಮ್ಮಗೂನ ಎತ್ಕೊಳೋಕೆ ಸಿದ್ಧಳಾಗಿ ಹೋಗಬೇಕು” ಎಂದ.

ಒಂದು ಕ್ಷಣ ಅಚ್ಚರಿ, ಆನಂದಗಳೆಲ್ಲಾ ಒಟ್ಟಿಗೆ ಮೇಳೈಸಿದವು. ಎಮರ್ಜನ್ಸಿಗೆ ಇರ್ಲೀಂತ ಮಾಡಿಸಿದ್ದು ನಾನೇ ಹೋಗುವ ಹಾಗಾಯ್ತೇ? ಜೊತೆಗೆ ‘ಅಮೆರಿಕಾಕ್ಕೆ ಹೋಗ್ತೀನೀಂತ ಭಾರೀ ಮೆರೀತಿದ್ಲಲ್ಲಾ ಬೀಗಿತ್ತಿ. ತಕ್ಕ ಶಾಸ್ತಿಯಾಯ್ತು ಬಿಡು’ ಎನಿಸಿತು. ಮರುಕ್ಷಣ ‘ಛೇ! ಹಾಗೆ ಯೋಚಿಸಬಾರ್ದಿತ್ತು. ಎಷ್ಟು ಉತ್ಸಾಹದಿಂದ ಹೊರಟಿದ್ದರು...’ ಎಂದುಕೊಂಡು “ಪಾಪ, ಧರಾ ಎಷ್ಟು ಬೇಜಾರು ಮಾಡ್ಕೋತಾಳೊ ಏನೋ... ಈ ಸಮಯದಲ್ಲಿ ಹೆಣ್ಣು ಮಕ್ಕಳಿಗೆ ತಾಯಿಯ ಅವಶ್ಯಕತೆ ಇರುತ್ತೆ. ಅವರು ಮತ್ತೆ ಅಪ್ಲೈ ಮಾಡಬಹುದಲ್ಲವಾ?” ಎಂದು ಕೇಳಿದೆ. “ಮಾಡಬಹುದು... ಆದರೆ ನಿನ್ನ ಮಗ ಬೇಕೆಂತ್ಲೇ ಮಾಡಿರೋ ಐಡಿಯಾ ಇದು” ಎಂದ. ನನ್ನ ಮಾತೃಹೃದಯ ಉಬ್ಬಿತು. ‘ಅಲ್ವೇ ಮತ್ತೆ... ಎಷ್ಟಾದರೂ ನನ್ನ ಮಗ. ಎಷ್ಟು ಹಾರಾಡಿದ್ರೂ ತಾಯಿಯ ಸೆಳೆತ ಇದ್ದೇ ಇರುತ್ತೆ. ಮೊದಲಿನಿಂದಲೂ ನಾನು ಹಾಕಿದ ಗೆರೆ ದಾಟದ ಮಗ... ಯಾವಾಗ್ಲೂ ನನ್ನ ಸೆರಗಲ್ಲೇ ಕೈ ಒರೆಸೋನು... ‘ಅಮ್ಮಾ, ನಾನು ದೊಡ್ಡೋನಾದ ಮೇಲೆ ನಿನ್ನ ವಿಮಾನದಲ್ಲಿ ಹಾರಾಡಿಸ್ತೀನಮ್ಮಾ’ ಅನ್ನೋನು... ಏನೇ ತಿಂಡಿ ತಂದ್ರೂ ಒಂದು ತುಂಡು ನನ್ನ ಬಾಯಿಗಿಟ್ಟೇ ತಿನ್ನೋನು... ಮದುವೆಯಾದ ಮೇಲೆ ಸ್ವಲ್ಪ ಬದಲಾದ ಮಾತ್ರಕ್ಕೆ ಮಗ ಸುಳ್ಳಾಗೋದ್ನಾ? ಮಮತೆ ಸತ್ತೋಯ್ತಾ? ಈ ಬದಲಾವಣೆ ಸಹಜ ತಾನೇ...’ ಎಂದು ಸಮರ್ಥಿಸಿಕೊಂಡೆ.

“ಮಗನ ಬಗ್ಗೆ ಬಹಳ ಒಳ್ಳೆಯ ಭಾವನೆ ತಾಳುವುದೇನೂ ಬೇಕಾಗಿಲ್ಲ” ಎನ್ನುವ ಸುಮಂತನ ಶರ ತಾಗಿತ್ತು. ನನ್ನ ಭಾವನೆಗಳನ್ನೇ ಬಚ್ಚಿಡುತ್ತ “ಮಗನ ಬಗ್ಗೆ ಅಲ್ವೋ... ಸೊಸೆ ಬಗ್ಗೆ ಯೋಚಿಸ್ತಾ ಇದ್ದೆ. ಅವಳಿಗೆ ನಾನು ಬರುವುದು ಇಷ್ಟ ಆಗ್ಬೇಕಲ್ಲ...” ಎಂದೆ. “ಅಯ್ಯೋ.. ಮುಗ್ಧೇ... ನಿನ್ನ ಮಗ, ಸೊಸೆ ಸೇರಿ ಮಾಡಿರೋ ಪ್ಲಾನಿದು” ಎಂದ. ‘ಏನು ಹೇಳುತ್ತಿದ್ದಾನೆ?... ತ್ರಿಕಾಲಜ್ಞಾನಿಯಂತೆ... ಜ್ಯೋತಿಷಿಯಂತೆ...’ ಎಂದುಕೊಳ್ಳುತ್ತ “ನಿನಗೆ ಹೇಗೋ ಗೊತ್ತು? ಅಸಲಿಗೆ ಹೇಳ್ಬೇಕೂಂದ್ರೆ ನಿನ್ನ ದೃಷ್ಟೀಲಿ ನೀನೊಬ್ನೇ ಒಳ್ಳೆಯೋನು. ಉಳಿದವರೆಲ್ಲಾ ಕೆಟ್ಟೋರೂಂತ ನಿನ್ನ ಭಾವನೆ. ಅದ್ರಲ್ಲಿ ಅನಂತ,